ಡಿ.ಎನ್. ಶ್ರೀನಾಥ್

# ಕಾರ್ಖಾನೆಯ ಕೆಲಸವಾಗಬಾರದು



ಅನುವಾದ ಸಂವಾದ

1 ಉತ್ತಮ ಅನುವಾದಗಳು ವಾಸ್ತವವಾಗಿಯೂ ವಿಶ್ವದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರವೇಶ–ದ್ವಾರಗಳಾಗಿವೆ. ಆದರೆ ಸೃಜನಶೀಲ ಅನುವಾದಕರ/ಅನುವಾದಗಳ ಕೊರತೆಯಿದೆ. ಒಂದು ವೇಳೆ ಸೃಜನಶೀಲ ಅನುವಾದ ಬಂದರೂ ಅದನ್ನು ಪ್ರಕಟಿಸುವ ಪ್ರಕಾಶಕರ ಸಂಖ್ಯೆ ಅತಿ ಕಡಿಮೆ ಅಥವಾ ಇಲ್ಲ ಅಥವಾ ಅಂಥ ಪ್ರಕಾಶಕರು ಅನುವಾದಕರ ಗಮನಕ್ಕೆ ಬರುವುದಿಲ್ಲ. ಬಹುತೇಕ ಪ್ರಕಾಶಕರು ಅದೂ ಭಾರತೀಯ ಭಾಷೆಗಳಲ್ಲಿನ ಅನುವಾದಗಳನ್ನು ಪ್ರಕಟಿಸಲು ಮುಂದೆ ಬರುವುದಿಲ್ಲ. ಇದಕ್ಕೆ ಪುಸ್ತಕಗಳನ್ನು, ಅದೂ ಅನುವಾದಿತ ಪುಸ್ತಕಗಳನ್ನು ಕೊಂಡು ಓದುವ ಓದುಗರ ಕೊರತೆಯ ಜೊತೆಗೆ, ಆಯಾ ರಾಜ್ಯಗಳ ಗ್ರಂಥಾಲಯಗಳ ಖರೀದಿ ಪ್ರಕ್ರಿಯೆಗಳು ಕಾರಣ. ಹಾಗೂ ಅನುವಾದಕರಿಗೆ ಅವರ ಶ್ರಮಕ್ಕೆ ಸಿಗದ ಬೆಲೆಯೂ ಕಾರಣ.